## ರಂಜನೀಯ ಧಾರಾವಾಹಿ

ಕಲರ್ಸ್‌ನ 'ಮಂಗಳೂರು ಹುಡಗಿ ಹುಬ್ಬಳ್ಳಿ ಹುಡುಗ' ರಾಜ್ಯದ ಸಮಸ್ತ ವೀಕ್ಷಕರನ್ನು ಅರ್ಥಪೂರ್ಣವಾಗಿ ಮನರಂಜಿಸುತ್ತಿರುವ ಧಾರಾವಾಹಿ. ಕಲಾವಿದರ ನೈಜ ಅಭಿನಯ, ಎರಡು ಭಾಷೆಗಳ ಅಪೂರ್ವ ಸ್ನೇಹ ಸಮ್ಮಿಲನವೆಂದರೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಸವತಿ ಮತ್ಸರ, ಹಾವುಗಳ ದ್ವೇಷದಂತಹ ವೀಕ್ಷಕರಿಗೆ ಕಿರಿಕ್ ನೀಡುವ ಧಾರಾವಾಹಿಗಳಿಗಿಂತ ಮನರಂಜನೆಯ ನಿಜ ಅರ್ಥವನ್ನು ತೆರೆದಿಡುವಲ್ಲಿ ಈ ಧಾರಾವಾಹಿ ಸಫಲತೆಯನ್ನು ಕಂಡಿದೆ. ಸೂಪರ್ (ಕಲರ್ಸ್)ನಲ್ಲಿ ಅನವರತ ಇಂತಹ ಅರ್ಥಪೂರ್ಣ ಧಾರಾವಾಹಿ ಮೂಡಿಬರಲಿ.

**ಕುಬೇರಪ್ಪ ಎಂ. ವಿಭೂತಿ, ಹರಿಹರ**

## ಬೋರ್ ಆಗದಿರಲಿ

ಝೀ ವಾಹಿನಿಯಲ್ಲಿ ಪ್ರಸಾರವಾಗುವ 'ಜನುಮದ ಜೋಡಿ' ಧಾರಾವಾಹಿ ಪ್ರಾರಂಭದಲ್ಲಿ ಸ್ವಲ್ಪ ಎಳೆದರೂ ಈಗ ಚೆನ್ನಾಗಿ ಮೂಡಿಬರುತ್ತಿದೆ. ತನ್ನ ಹಿಂದಿನ ಜನ್ಮದ ಪ್ರೇಮಿ ಆದಿತ್ಯನನ್ನು ಹುಡುಕಿಕೊಂಡು ವಸುಂಧರ (ಕಾವೇರಿ) ಸಂಜುವಿನ ಕಾರಿನಲ್ಲಿ ಬರುವಾಗ ಕಾರು ಕೆಟ್ಟು ರಿಪೇರಿಗೆ ಬಿಡುತ್ತಾರೆ. ಅಲ್ಲಿಂದ ಕಾಫಿ ತೋಟಕ್ಕೆ ಬರುತ್ತಾರೆ. ಅವರು ಮನೆ ಬಿಟ್ಟು ಬರುವಾಗ ಲಗೇಜ್ ಇರುವುದಿಲ್ಲ. ಇದ್ದರೂ ಕಾರಿನಲ್ಲಿ ಇರುವುದೇನೋ! ಆದರೂ ಪ್ರತಿ ಸಂಚಿಕೆಯ ದೃಶ್ಯದಲ್ಲಿ ಅವರ ಉಡುಪು ಬದಲಾಗಿರುತ್ತದೆ. ಇದು ಚಲನಚಿತ್ರದ ದೃಶ್ಯಗಳ ಎಫೆಕ್ಟ್ ಇರಬಹುದೆ?

ಕಾಫಿ ತೋಟ ನೋಡುವಾಗ ಮೊದಲು ಸಂಜುವಿಗೆ (ಆದಿತ್ಯ) ನೆನಪಾಗುತ್ತಿದ್ದ ದೃಶ್ಯ ಈಗ ವಸುಂಧರಳ ಜೊತೆ ಬರುವಾಗ ಅವಳಿಗೆ ಹಿಂದಿನ ಘಟನೆ, ಸ್ಥಳ ನೆನಪಾಗುವಂತೆ ಸಂಜುವಿಗೆ ನೆನಪಾಗುವುದಿಲ್ಲ. ಹೀಗೇಕೆ ಎಂಬುದು ಮುಂದಿನ ಸಂಚಿಕೆಗಳಲ್ಲಿ ತಿಳಿಯಬಹುದೇನೋ? ಒಟ್ಟಿನಲ್ಲಿ ಧಾರಾವಾಹಿ ಬೋರ್ ಹೊಡಿಸದೆ ಮುಂದುವರೆದು ಉತ್ತಮ ಅಂತ್ಯ ಕಾಣಲಿ.

ವಾರದ ಪತ್ರ

## ಮೌಢ್ಯದ ಪ್ರಚಾರ

ನಮ್ಮ ಕನ್ನಡ ಚಾನೆಲ್‌ಗಳೂ ಸೇರಿದಂತೆ ಎಲ್ಲಾ ಭಾಷೆಯ ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಸ್ಥಳೀಯ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಜ್ಯೋತಿಷ ಶಾಸ್ತ್ರ, ಸಂಖ್ಯಾ ಶಾಸ್ತ್ರ, ವಾಸ್ತು ಶಾಸ್ತ್ರ ಕುರಿತ ಕಾರ್ಯಕ್ರಮವನ್ನು ಎಷ್ಟೊಂದು ಮಂದಿ ನೋಡುತ್ತಿದ್ದಾರೆ. ಶ್ರೀ ಸಾಮಾನ್ಯ, ಅವಿದ್ಯಾವಂತನಿಂದ ಹಿಡಿದು ವಿದ್ಯಾವಂತರವರೆಗೆ ಇದನ್ನು ನಂಬಿ ತಮ್ಮ ಸುಂದರ ಬದುಕನ್ನು, ಸಂಸಾರವನ್ನು ಹಾಳುಗೆಡವಿಕೊಂಡು, ಮನಸ್ಸಿನ ಶಾಂತಿಯನ್ನು, ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವುದು ದುರಂತ.

ಈ ಶಾಸ್ತ್ರ ಹೇಳುವ ಧೂರ್ತ ವ್ಯಕ್ತಿಗಳನ್ನು ನೋಡಿದರೆ ಕೊರಳ ತುಂಬಾ ರುದ್ರಾಕ್ಷಿಮಾಲೆ, ಢಾಳ ವಿಭೂತಿ, ಹತ್ತೂ ಬೆರಳುಗಳಿಗೆ ಕನಿಷ್ಠ ಹದಿನೈದು ಉಂಗುರುಗಳು, ಚಿನ್ನದ ಸರ, ಬ್ರೇಸ್‌ಲೆಟ್‌ಗಳು. ಭಕ್ತಗಣಗಳು ಇಂತವರನ್ನು ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡುವುದು, ಹೂವಿನಿಂದ ಅಭಿಷೇಕ ಮಾಡುವುದು, ಕಟೌಟಿಗೆ ಹಾಲಿನ ಅಭಿಷೇಕ ಮಾಡುವುದು ಮೊದಲಾದವುಗಳಿಂದ ಪ್ರಚಾರ ಸಿಗುತ್ತದೆ. ಈ ಮೂಲಕ ಭಕ್ತ (ಅಮಾಯಕ ಶ್ರೀ ಸಾಮಾನ್ಯರನ್ನು) ರನ್ನು ತಮ್ಮತ್ತ ಸೆಳೆಯುವ ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ.

ಕಳೆದ ಎಂಟು ಹತ್ತು ವರ್ಷಗಳ ಹಿಂದೆ ಈ ಜ್ಯೋತಿಷಿಗಳು, ಸಂಖ್ಯಾ ಶಾಸ್ತ್ರಜ್ಞರು, ಭೂತ ಪ್ರೇತ ಬಿಡಿಸುವವರು, ವಾಸ್ತು ಸಮಸ್ಯೆಗೆ ಪರಿಹಾರ ಎಂದು ಅಪರೂಪಕ್ಕೊಮ್ಮೆ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಕೊಟ್ಟು, ಯಾವುದೋ ಗಲ್ಲಿ ಮೂಲೆಗಳಲ್ಲಿನ ಒಂದು ಚಿಕ್ಕ ಕೋಣೆಯಲ್ಲಿ ಕುಳಿತು ಹಣ ದೋಚುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಸ್ಥಳೀಯ ಚಾನೆಲ್‌ಗಳು, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಚಾನೆಲ್‌ಗಳು ಇಂತವರ ಕಾರ್ಯಕ್ರಮ ಪ್ರಸಾರ ಮಾಡುತ್ತಿವೆ. ಸಾಮಾಜಿಕ ಕಳಕಳಿ ಇಲ್ಲದ ಇಂತಹ ಕಾರ್ಯಕ್ರಮಗಳ ಮೇಲೆ ನಿಷೇಧ ಹೇರಬೇಕು. ಈ ನಿಟ್ಟಿನಲ್ಲಿ ಆರ್‌ಟಿಐ ಕಾರ್ಯಕರ್ತರು ಪ್ರವೃತ್ತರಾಗುವರೇ?

**ಶಿವಮೊಗ್ಗ ರಮೇಶ, ಮೈಸೂರು**

## ಜ್ಯೋತಿಷ ಬೇಡ

ಖಾಸಗಿ ಟಿ.ವಿ. ವಾಹಿನಿಗಳು ಮೌಢ್ಯವನ್ನು ಬಿತ್ತರಿಸುವ ಕೇಂದ್ರಗಳಾಗಿವೆ. ಯಾವನಾದರೂ ಕೆಮ್ಮಿದರೇ ಸಾಕು ಗಡ್ಡ ಮೀಸೆ ಬಿಟ್ಟುಕೊಂಡ ಜ್ಯೋತಿಷಿಗಳನ್ನು ಕೂಡಿಸಿಕೊಂಡು ಗಂಟೆಗಟ್ಟಲೇ ಚರ್ಚೆ ಮಾಡಿ ಸಮಯ ಹಾಳು ಮಾಡುತ್ತಿವೆ. ಬಡಬಗ್ಗರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಇಂತಹ ಜ್ಯೋತಿಷಿಗಳನ್ನು ಓಡಿಸುವವರೆಗೂ ನಮ್ಮ ಟಿವಿ ವೀಕ್ಷಕರಿಗೆ ಮುಕ್ತಿ ಇಲ್ಲ.

**ಹೆಚ್.ಆರ್. ಕೊಳಗಿ, ಸಾಗರ**

## ಪ್ರಥಮ್ ಗೆಲ್ಲಲಿ

ಬಿಗ್‌ಬಾಸ್ ಮುಗಿಯುವ ಹಂತಕ್ಕೆ ಬರುತ್ತಿದೆ. ದಿನ ಕಳೆದಂತೆ ಸ್ಪರ್ಧಿಗಳ ಗುಣಧರ್ಮ ಗೊತ್ತಾಗುತ್ತಿದೆ. ಮೊದಲ ದಿನದಿಂದ ಪ್ರಥಮ್‌ನನ್ನು ಬೈಯುತ್ತಲೇ ಬಂದವರು, ಇಂದು ಅವನೇ ಉತ್ತಮ.. ನೇರ ನಡವಳಿಕೆಯವನು ಎಂದು ಹೊಗಳುತ್ತಿದ್ದಾರೆ. ಟೀಕೆ– ಹೊಗಳಿಕೆ ಎರಡನ್ನೂ ಸಮವಾಗಿ ಸ್ವೀಕರಿಸುವ ಇತಿಹಾಸ, ತತ್ವ, ಧರ್ಮ, ಕನ್ನಡ ಸಾಹಿತ್ಯ ಪ್ರತಿಯೊಂದನ್ನು ತಿಳಿದುಕೊಂಡಿರುವ ಜಾಣ ಈ ಪ್ರಥಮ. ಟಾಸ್ಕ್ ಅನ್ನು ದೈತ್ಯನಂತೆ ಪೂರೈಸುವ, ಬಿಗ್‌ಬಾಸ್ ಮನೆಯನ್ನು ಲವಲವಿಕೆಯಿಂದಿಟ್ಟಿರುವ ಪ್ರಥಮ್ ಈ ಬಾರಿ ಬಿಗ್‌ಬಾಸ್ ಗೆಲ್ಲಲೇಬೇಕು ಎಂಬುದೇ ಯುವ ಜನತೆಯ ಮತ್ತು ನೇರನುಡಿಯುಳ್ಳವರ ಆಸೆ.

**ಶೋಭಾ, ಶಿವಮೊಗ್ಗ**

## ಕಳಪೆ ಧಾರಾವಾಹಿಗಳು

ಕಳೆದ 2–3 ವರ್ಷಗಳಿಂದ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಕಳಪೆ ಧಾರಾವಾಹಿಗಳು, ಹಾಸ್ಯಾಸ್ಪದ ಮಜಾ ಟಾಕೀಸ್ ಮತ್ತು ಬಾಲಿಶ ಕಲ್ಪನೆಯ ಬಿಗ್ ಬಾಸ್ (ಇತರೆ ವಾಹಿನಿಗಳಲ್ಲಿ ಜಾಹೀರಾತು ಪ್ರಸಾರವಾದಾಗ ವಾಹಿನಿ ಬದಲಾಯಿಸಿ ಗಮನಿಸಿದ್ದು). ನಿರಂತರವಾಗಿ ಹೀಗೆಯೇ ಮುಂದುವರಿಯುತ್ತಿದ್ದರೆ ಕಲರ್ಸ್ ಕನ್ನಡ 'ಬಂದ್' ಆಗುವುದರಲ್ಲಿ ಸಂದೇಹವೇ ಇಲ್ಲ. ವಾಹಿನಿಯ ಬಿಸಿನೆಸ್ ಹೆಡ್ ಇದನ್ನು ಗಮನಿಸುವುದಿಲ್ಲವೇ?

**ಆಶಾ ಕುಲಕರ್ಣಿ, ಬಾಗಲಕೋಟ**

## ಅವಮಾನ

ಗಂಗಾ ಧಾರಾವಾಹಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ನಡೆಯುವ ಸನ್ನಿವೇಶಗಳು ಗುರುವಿನ ಸ್ಥಾನಕ್ಕೆ ಮುಜುಗರ ಉಂಟು ಮಾಡುವಂತಿವೆ. ತಮ್ಮ ಸ್ವಂತ ಕೆಲಸಗಳನ್ನು ಮಾಡಿಸಿಕೊಂಡು ಪಾಠ ಹೇಳದೆ ಸ್ವತಃ ಗುರುಗಳೇ ವಿದ್ಯಾರ್ಥಿಗಳಲ್ಲಿ ಗುಂಪುಗಾರಿಕೆ ಮಾಡಿಸುತ್ತಾರೆ ಎಂದು ಬಿಂಬಿಸಲಾಗುತ್ತಿದೆ. ಇಂತಹ ದೃಶ್ಯಗಳಿಂದ ಶಿಕ್ಷಕರಿಗೆ ಮುಜುಗರ ಉಂಟಾಗುತ್ತದೆ.

**ಮಾಂತೇಶ ಬಾಗೇವಾಡಿ, ಬಾಗಲಕೋಟ**

## ಮಜಾ ಅಲ್ಲ ಸಜಾ!

'ಹೆಂಡತಿಯನ್ನು ಬಸಿರು ಮಾಡೋದು ಕಷ್ಟ ಅಂತ ಯಾವನೋ ಒಬ್ಬ ಬಸುರಿಯನ್ನೇ ಮದುವೆ ಮಾಡಿಕೊಂಡನಂತೆ!' ಇದು ಸೃಜನಶೀಲತೆಯ ಹೆಸರಿನಲ್ಲಿ ಮಜಾ ಟಾಕೀಸಿನ ಸೃಜನ್ ಬಾಯಿಯಿಂದ ಬರುವ ಅಪಹಾಸ್ಯದ ನುಡಿ.

ನೃತ್ಯ ಮಾಡುವುದಕ್ಕಾಗಿ ನಟಿಯೊಬ್ಬಳು (ಅತಿಥಿ) ಪಾದರಕ್ಷೆಯನ್ನು ಕಳಚುತ್ತಿದ್ದಂತೆಯೇ ಈ ಸೃಜನ್ ಏನು ಹೇಳುತ್ತಾನೆ ಗೊತ್ತೇ? 'ಚಪ್ಪಲಿ ಮಾತ್ರ ಬಿಚ್ಚೋದಾ?' ಎಂದು ಆ ನಟಿಯನ್ನು ಪ್ರಶ್ನಿಸುತ್ತಾನೆ.

ಮೂವತ್ತು ನಿಮಿಷದಲ್ಲಿ ಮೂವತ್ತು ಅಶ್ಲೀಲ, ಅನುಚಿತ ಮಾತುಗಳನ್ನೇ ಆಡುತ್ತಾ 'ಮಜಾ' ಹೆಸರಿನಲ್ಲಿ ಮಜಾ ತೆಗೆದುಕೊಳ್ಳುತ್ತಿರುವ ಸೃಜನ್ ಎಂಬ ವ್ಯಕ್ತಿಗೆ ಸೃಜನಶೀಲತೆ ಕಲಿಸಿಕೊಡಬೇಕಾಗಿದೆ.

**ಪಿ.ಜೆ. ರಾಘವೇಂದ್ರ, ಮೈಸೂರು**